ಶ್ರೀ ಕಾಗೋಡು ತಿಮ್ಮಪ್ಪ —ಕಂಪ್ ಮಾಡುವುದಕ್ಕೆ ಮುಂಚೆ ಟೆಸ್ಟ್ ಮಾಡಿದ್ದರೆ?

ಶ್ರೀ ಡಿ. ಕೆ. ನಾಯ್ಕರ್.—ಇದರಲ್ಲಿ ಈ ನೀರನ್ನು ಕೊಡಬೇಕಾದಾಗ ಆ ಬಗ್ಗೆ ಆಗಲೇ ಹೇಳಿದ್ದೇನೆ. ರಿಸರ್ವ್ ಬಂದನಂತರ ಡಿ.ಡಿ.ಟಿ. ಮಿಕ್ಸ್ ಆಗಿದೆ ಎಂದು ಹೇಳಿದರೆ, ಯಾರಾದರೂ ನೆಗ್‌ಲಿಜಿಯನ್ಸ್ ಆಗಿ ಮಿಕ್ಸ್ ಮಾಡಿದರೆ ಕ್ರಮ ತೆಗೆದುಕೊಳ್ಳುವ ಪ್ರಸಂಗ ಬರುತ್ತದೆ. ಆಗ ಬೆಯಿಲ್‌ಔಟ್ ಮಾಡಿ ಹೊಸ ನೀರು ತುಂಬುವ ಪ್ರಸಂಗ ಬರುತ್ತದೆ ಎಂದು ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ —೨೨-೩ಕ್ಕೆ ಬಂದಾಗ ಪಂಪ್ ಮಾಡುವ ಏರ್ಪಾಡು ಮಾಡಿದ್ದಾರೆ. ಆದಕ್ಕೆ ಮುಂಚೆ ಟೆಸ್ಟ್ ಮಾಡಿದರೋ ಇಲ್ಲವೊ? ಮಾಡಿದ್ದರೆ ಹೇಳಿ.

ಶ್ರೀ ಡಿ. ಕೆ. ನಾಯ್ಕರ್ —ಈ ನೀರನ್ನು ಏತಕ್ಕೆ ಬಿಟ್ಟರೂ ಎಂದರೆ ಕಾವೇರಿ ನದಿ ನೀರನ್ನು ಇರಿಗೇಷನ್‌ಗೆ ಉಪಯೋಗಮಾಡಬೇಕು ಎಂದು ಕೊಟ್ಟಿದ್ದಾರೆ. ಆದ್ದರಿಂದ ಇದೂ ಇಲ್ಲದಿದ್ದರೆ ನೀರು ಸಪ್ಲೈ ಮಾಡುವುದಕ್ಕೇ ಆಗುತ್ತಾ ಇರಲಿಲ್ಲ.

3-00 P.M.

ಇನ್ನು ಒಂದು ವಿಷಯ ಏನು ಎಂದರೆ ಈ ನೀರನ್ನು ಕುಡಿಯುವುದರಿಂದ ಹುಡುಗರಿಗೆ ವಾಮಿಟಿಂಗ್ ಸೆನ್‌ಸೇಷನ್ ಆಯಿತು ಎಂದು ಹೇಳಿದರು. ಈ ವಾಸನೆ ಬಂದನಂತರ ಫಿಷ್‌ಗಳೂ ಸಾಯತ್ತವೆ. ಈಗ ವಾಸನೆ ಬಂದಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಅಲ್ಲದೇ ಚಿಕ್ಕಮಕ್ಕಳು ಕುಡಿದಾಗ ವಾಮಿಟಿಂಗ್ ಸೆನ್‌ಸೇಷನ್ ಆಗಿದೆ ಎಂದು ಹೇಳಿದೆ. ಅದನ್ನು ಈಗ ಟೆಸ್ಟ್ ಮಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ —ಈಗ ಇರಿಗೇಷನ್‌ಗೆ ನೀರು ಬಿಡಬೇಕು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕಾವೇರಿ ನೀರನ್ನು ಕುಡಿಯಲಿಂವುದಕ್ಕೆ ಇಲ್ಲಿಗೆ ತರುತ್ತೇವೆ ಎಂದು ಹೇಳಿ ಈಗ ಅದನ್ನು ಇರಿಗೇಷನ್‌ಗೆ ಬಿಟ್ಟಿದ್ದೀರಿ. ಇವೊತ್ತು ವೃಷಭಾವತಿ ವ್ಯಾಲಿಯಲ್ಲಿ ಸೂವರೇಜ್ ನೀರು ಹೋಗುತ್ತಿದೆ. ಅದನ್ನು ಪ್ರೋಸೆಸ್ ಮಾಡಿ ವಾಟರ್ ಸಪ್ಲೈ ಬೋರ್ಡ್‌ವರು ನೀರನ್ನು ಕುಡಿಯುವುದಕ್ಕೆ ಬಿಟ್ಟುಬಿಟ್ಟರೆ ಜನರಿಗೆ ಕುಡಿಯಲು ಕಷ್ಟವಾಗುತ್ತದೆ.

ಅಧ್ಯಕ್ಷರು —ಲಂಡನ್‌ನಲ್ಲಿ ಆ ರೀತಿ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ೨೨ನೇ ತಾರೀಖು ಪಂಪ್ ಔಟ್ ಮಾಡಿದ್ದಾರೆಯಲ್ಲ ಅದಕ್ಕಿಂತ ಮುಂಚೆ ಟೆಸ್ಟ್ ಮಾಡಿದ್ದಾರೆ ಎನ್ನುವ ರಿಪೋರ್ಟ್ ಕೊಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರದ ಯಥಾಪ್ರಕಾರದ ವಾದ ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಇದು ೨೦ ಲಕ್ಷ ಜನರ ಸಾವು ಉಳಿವಿನ ಪ್ರಶ್ನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ೩೧ನೇ ತಾರೀಖು ಕಳುಹಿಸಿದರೆ ನಾಲ್ಕು ದಿವಸ ಬೇಕಾಗುತ್ತದೆಯೇ?

ಶ್ರೀ ಡಿ. ಕೆ. ನಾಯ್ಕರ್.—ಇವೊತ್ತು ಸಂಜೆ ಬರಬಹುದು, ಇಲ್ಲ ಎಂದರೆ ನಾಳೆ ಮುಂಜಾನೆ ಕೊಡುತ್ತೇನೆ.

Notice about death of Kumar at Commercial Street Police Station

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ. ರೂಲ್ ೩೨೨ರ ಪ್ರಕಾರ ನಾನು ಮತ್ತೆ ಮಾನ್ಯ ಸದಸ್ಯರಾದ ಹನುಮೇಗೌಡರು ಬೆಂಗಳೂರು ನಗರದ ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್ ಸ್ಟೇಷನ್‌ನಲ್ಲಿ ಇದ್ದ ಒಬ್ಬ ಖೈದಿ ಕುಮಾರ್ ಎನ್ನುವನ ಬಗ್ಗೆ ಒಂದು ನೋಟೀಸ್ ಕಳಿಂಹಿಸಿದ್ದೆವು.

ಅಧ್ಯಕ್ಷರು.—ನಾನು ಅದನ್ನು ಪತ್ರಿಕೆಯಲ್ಲಿ ಓದಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಕಾನ್‌ಸ್ಟೇಬಲ್, ಮತ್ತು ಹೆಡ್‌ಕಾನ್‌ಸ್ಟೇಬಲ್‌ಗೆ ಸಸ್ಪೆಂಡ್ ಮಾಡಿದ್ದಾರೆ.

ಅಧ್ಯಕ್ಷರು.—ನಾಳೆ ಮುಖ್ಯ ಮಂತ್ರಿಗಳು ಬರಲಿ ಅವರು ಹೇಳುತ್ತಾರೆ.